ಒ ಎಸ್ 63/2019 ಪಿ.ಡಬ್ಲ್ಯೂ:1

ಇಂದು ದಿಃ 03.03.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಸ್ ಎನ್ ವಕೀಲರಿಂದಃ

ಬಸಪ್ಪನವರಿಗೆ ಬಂದ ಆಸ್ತಿಯಲ್ಲಿ 2 ಎಕರೆ ಆಸ್ತಿಯನ್ನು ಗಯೀಬ್ ಸಾಬ್ ರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಗೆಜ್ಜಗಳ್ಳಿ ಮಲ್ಲಪ್ಪನಿಗೆ 1 ಎಕರೆ ಮಾರಾಟ ಮಾಡಿದರು ಎಂದರೆ ಸರಿ ಆದರೆ ಉಳಿದ 1 ಎಕರೆ ನಮ್ಮ ತಂದೆ ಹೆಸರಿನಲ್ಲಿತ್ತು. ಆ 1 ಎಕರೆ ಆಸ್ತಿಯಲ್ಲಿ ನಾವು ಸ್ವಾಧೀನ ಇದ್ದೇವೆ ಎಂದರೆ ನಾನು ಇಲ್ಲ ನನ್ನ ಸಂಗಪ್ಪ ಇದ್ದಾನೆ. ನಾವು ಸ್ವಾಧೀನ ಇರುವ ಜಮೀನಿನ ಪೂರ್ವದ ಕಡೆ ಹನ್ಸಾರ್ ರವರ ಜಮೀನು ಇದೆ. ನಾನು 24 ಗುಂಟೆ ಜಮೀನು ಮತ್ತು ನನ್ನ ತಂದೆಗೆ ಸೇರಿದ 1 ಎಕರೆ ಜಮೀನಿನಲ್ಲಿ ಸ್ವಾಧೀನ ಇದ್ದೇನೆ ಎಂದರೆ ಸರಿಯಲ್ಲ. ನಾನು ಸ್ವಾಧೀನ ಇರುವ 24 ಗುಂಟೆ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ. 1 ಎಕರೆ ಜಮೀನು ನನ್ನ ತಂದೆಯ ತಮ್ಮ ಸಂಗಪ್ಪನ ಜಮೀನು. ಸಂಗಪ್ಪನಿಗೆ ಒಬ್ಬ ಮಗ ಇದ್ದಾನೆ. ಮಾದಯ್ಯನಿಗೆ 1 ಎಕರೆ 9 ಗುಂಟೆ ಜಮೀನು ಕೊಟ್ಟಿದ್ದರು ಎಂದರೆ ಸರಿ. 2ನೇ ವಾದಿಯ ತಾಯಿ ಮೃತಪಟ್ಟಾಗ ಮಹದೇವಮ್ಮ ಅಪ್ರಾಪ್ತೆಯಾಗಿದ್ದಳು. ಮಹದೇವಮ್ಮ ಮಗುವಾಗಿದ್ದಾಗ ಅವರನ್ನು ನೋಡಿಕೊಳ್ಳಲು ಚೆನ್ನಾಂಜಪ್ಪ ಮಾದಯ್ಯನಿಗೆ ಅಪ್ರಾಪ್ತ ಮಗಳ ಪರವಾಗಿ ಕೊಟ್ಟರು ಎಂದರೆ ಸರಿ. ನಂಜಪ್ಪನಿಗೆ ಬಂದ 2 ಎಕರೆ ಆಸ್ತಿಯನ್ನು ಕೆಂಪದೇವಮ್ಮ ಅಂದರೆ ಪ್ರತಿವಾದಿಯ ತಾಯಿಗೆ ಕೊಟ್ಟರು ಎಂದರೆ ಸರಿಯಲ್ಲ. ಪ್ರತಿವಾದಿಯ ಗಂಡನ ಹೆಸರು ದಾವಾ ಆಸ್ತಿ ದಾಖಲೆಗಳಲ್ಲಿ ಬರುತ್ತಿತ್ತು ಮತ್ತು ಅವರೇ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿ 1 ಎಕರೆ 20 ಗುಂಟೆ ಸೊಳ್ಳಾಪುರದ ಶಿವಣ್ಣ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಂತರ ಕೆಂಪದೇವಮ್ಮನ ಮಗಳನ್ನು ಸೊಳ್ಳಾಪುರದ ಶಿವಣ್ಣನಿಗೆ ಮದುವೆ ಮಾಡಿಕೊಟ್ಟಿದ್ದರು. 1 ಎಕರೆ 20 ಗುಂಟೆ ಜಮೀನಿನಲ್ಲಿ ಪ್ರತಿವಾದಿ ತಂಗಿ ನಿಂಗಮಣಿ ಮತ್ತು ಪುಟ್ಟಮ್ಮ ಸ್ವಾಧೀನ ಇದ್ದೇವೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ತುಂಬಾ ಹಿಂದೆಯೇ ವಿಭಾಗವಾಗಿದ್ದು ಎಲ್ಲಾ ಹೆಣ್ಣು ಮಕ್ಕಳಿಗೆ ವಿಭಾಗ ಕೊಟ್ಟು ಆಗಿದೆ ಎಂದರೆ ಸರಿಯಲ್ಲ. ವಿಭಾಗವಾದ ಆಸ್ತಿಯಲ್ಲಿ ನಮಗೆ ವಿಭಾಗ ಕೊಟ್ಟಿದ್ದರು ಆದರೆ ಅದಲು ಬದಲಾಗಿದೆ ಎನ್ನುತ್ತಾರೆ. ಚೆನ್ನಂಜಪ್ಪದ ಆಸ್ತಿಗಳು ಹಿಂದೆಯೇ ವಿಭಾಗ ಆಗಿತ್ತು ಎಂದರೆ ಸರಿ. ದಾವಾ ಸ್ವತ್ತನ್ನು 1995ರಲ್ಲಿ ಶಾಂತಮ್ಮರವರು ಬಸವಣ್ಣನಿಗೆ ಭೋಗ್ಯ ಮಾಡಿದ ವಿಚಾರ ಗೊತ್ತು. ನಂತರ ಅದನ್ನು ಬಸವಣ್ಣನವರು ಮಹದೇವಪ್ಪನಿಗೆ ಮುಂದಕ್ಕೆ ವಹಿಸಿಕೊಟ್ಟರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಶಾಂತಮ್ಮ ಈಗ ಭೋಗ್ಯ ಬಿಡಿಸಿಕೊಂಡು ಈ ಸ್ವಾಧೀನ ಇದ್ದಾರೆ ಎನ್ನುವ ವಿಚಾರ ಗೊತ್ತು. ನಾವು ಸ್ವಾಧೀನ ಇರುವ ಜಮೀನಿನ ದಕ್ಷಿಣಕ್ಕೆ ನಾಗರಾಜು ಇದ್ದಾರೆ, ಉತ್ತರಕ್ಕೆ ಮಲ್ಲೇಗೌಡರ ಜಮೀನು ಎಂದರೆ ನನಗೆ ಗೊತ್ತಿಲ್ಲ. ಪೂರ್ವದ ಕಡೆ ನಾವೇ ಸ್ವಾಧೀನ ಇದ್ದೇವೆ ಎಂದರೆ ನಂಜೇಗೌಡರ ಆಸ್ತಿ ಇದೆ ಎನ್ನುತ್ತಾರೆ.

ನಾವು ಸ್ವಾಧೀನ ಇರುವ ಆಸ್ತಿ ದಾವೆಯಲ್ಲಿ ತೋರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿ ಸ್ವತ್ತಾಗಿದ್ದು ಅದನ್ನು ವಿಭಾಗ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಹಕ್ಕು ಇಲ್ಲ ಮತ್ತು ನಾವು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.